## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 740/2024

**ಸಾಕ್ಷಿಯನ್ನು ದಿಃ 04.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

ದಿಃ 07.07.2025ರ ಆದೇಶದಂತೆ ಈ ನ್ಯಾಯಾಲಯದ ಆಡಳಿತ ಶಿರಸ್ತೆದಾರರು ಸಂತ್ರಸ್ಥೆಯ ಹೇಳಿಕೆಯನ್ನು ಕಡತಕ್ಕೆ ಅಳವಡಿಸಿರುತ್ತಾರೆ.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 02.03.2024 ರಂದು ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-10 ಎಂದು, ಅದರಲ್ಲಿ ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ನಿಪಿ-10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜೆ.ಎಸ್.ಎ ವಕೀಲರಿಂದಃ**

ನಾನು ಮತ್ತು 1ನೇ ಆರೋಪಿ ಪ್ರೀತಿಸಿ ಮದುವೆಯಾಗಿದ್ದೇವೆ. ನನ್ನ ಮತ್ತು 1ನೇ ಆರೋಪಿಯ ಮದುವೆಗೆ ನನ್ನ ತಂದೆ ತಾಯಿ ಹಾಗೂ ಬಂದುಬಳಗದವರ ಒಪ್ಪಿಗೆ ಇರಲಿಲ್ಲ.

ಮದುವೆಯಾದ ನಂತರ ನಾನು ಮತ್ತು 1ನೇ ಆರೋಪಿ ನನ್ನ ಅತ್ತೆಯ ಮನೆ ಇರುವ ಬೀಜಗನಹಳ್ಳಿಯಲ್ಲಿ ಸಂಸಾರ ಪ್ರಾರಂಭಿಸಿದೆವು. ಮದುವೆಯಾದ ನಂತರ ನಾನು ಮತ್ತು 1ನೇ ಆರೋಪಿ ಮೈಸೂರಿನಲ್ಲಿ ಮನೆ ಮಾಡಿಕೊಂಡು ವಾಸವಿದ್ದೆವು ಎಂದರೆ ಸರಿಯಲ್ಲ. ನಮಗೆ ಮದುವೆಯಾಗಿ ಮೊದಲನೇ ಮಗಳಿಗೆ 5 ತಿಂಗಳು ತುಂಬುವವರೆಗೆ ನಾನು ಬೀಜನಗಹಳ್ಳಿಯಲ್ಲಿಯೇವಾಸವಿದ್ದೆ. ಆನಂತರ ಮೈಸೂರಿನಲ್ಲಿ ವಾಸ ಮಾಡಲು ಪ್ರಾರಂಭಿಸಿದ್ದೆ. ಮೈಸೂರಿನಲ್ಲಿ ಸುಮಾರು 4 ವರ್ಷ ಇದ್ದೆವು. ನಾನು ವಕೀಲರ ಮೂಲಕ ನೀಡಿದ ನೋಟಿಸ್ ನಲ್ಲಿ ಕರೋನಾ ಪ್ರಾರಂಭವಾಗುವವರೆಗೆ ಮೈಸೂರಿನಲ್ಲಿ ವಾಸವಿದ್ದೆ ಎಂದು ಹೇಳಿದ್ದೇನೆ ಎಂದರೆ ನನ್ನ 2ನೇ ಮಗುವಿನ ಮೊದಲನೇ ವರ್ಷದ ಹುಟ್ಟು ಹಬ್ಬವನ್ನು ಮೈಸೂರಿನಲ್ಲಿಯೇ ಆಚರಿಸಿದ್ದೇವೆ. ಕರೋನಾ ಮುಗಿದ ನಂತರ ಮೈಸೂರಿನಲ್ಲಿ ವಾಸಕ್ಕೆ ಹೆಚ್ಚು ಖರ್ಚುವೆಚ್ಚ ಬರುತ್ತದೆ ಎಂದು ನನ್ನ ಗಂಡ ಹೇಳಿದ್ದರಿಂದ ಬೀಜಗನಹಳ್ಳಿಗೆ ವಾಪಸ್ಸು ಬಂದೆವು. ಕರೋನಾ ಇರುವವರೆಗೆ ಮೈಸೂರಿನಲ್ಲಿಯೇ ವಾಸವಿದ್ದೆವು. ಆ ನಂತರ ನಾನು ಅತ್ತೆ ಮನೆಯಲ್ಲಿಯೇ ವಾಸವಿದ್ದೆ. ಮೈಸೂರಿನಲ್ಲಿ ನಾನು, ನನ್ನ ಗಂಡ, ನನ್ನ ಇಬ್ಬರು ಮಕ್ಕಳು ಮತ್ತು ನನ್ನ ಮೈದುನನಾದ 3ನೇ ಆರೋಪಿ ವಾಸವಿದ್ದೆವು. ನಾನು ಮತ್ತು ನನ್ನ ಗಂಡ ಮಕ್ಕಳೊಂದಿಗೆ ಮೈಸೂರಿನಲ್ಲಿ ಪ್ರತ್ಯೇಕವಾಗಿ ವಾಸ ಇದ್ದ ಕಾರಣ ಪುನಃ ಒಟ್ಟು ಕುಟುಂಬಕ್ಕೆ ಬರಬೇಕಾಗುತ್ತದೆ ಎಂದು ನಾನು ಇಲ್ಲ–ಸಲ್ಲದ ಜಗಳವನ್ನು ತೆಗೆದೆ ಎಂದರೆ ಸರಿಯಲ್ಲ. ನಾನು ಒಟ್ಟು ಕುಟುಂಬದಲ್ಲಿ ಇರಬೇಕಾಗುತ್ತದೆ ಎಂದು ಪದೇ ಪದೇ ಜಗಳ ಮಾಡಿ ಪೋಲಿಸ್ ಠಾಣೆಗೆ ಪದೇ ಪದೇ ದೂರು ಕೊಡುತ್ತಿದ್ದ ಕಾರಣ ನಾನು ಪ್ರತ್ಯೇಕ ಮನೆ ಕಟ್ಟಿಸಿಕೊಡುವ ಬೇಡಿಕೆಯನ್ನು ಇಟ್ಟಿದ್ದರಿಂದ 1ನೇ ಆರೋಪಿ ನನಗೆ ಪ್ರತ್ಯೇಕವಾದ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಕೇಸು ಆದ ನಂತರ ಮನೆ ಕಟ್ಟಿಸಿದ್ದಾರೆ ಎಂದು ನುಡಿಯುತ್ತಾರೆ. 1ನೇ ಆರೋಪಿಯ ಬಳಿ ನಾನು ಅವರ ತಂದೆ ತಾಯಿ ವಾಸವಿರುವ ಮನೆಯೇ ಬೇಕು, ಹೊಸ ಮನೆಗೆ ಹೋಗುವುದಿಲ್ಲ ಎಂದು ಹಠ ಮಾಡಿದೆ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ರೂ**. 300/–**ರ ಖರ್ಚಿನೊಂದಿಗೆ ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.